

ಯಾರೆಂದು ನನಗೆ ತಿಳಿಯದ, ಆದರೆ ನಾನ್ಯಾರೆಂದು ತಿಳಿದಂತಿದ್ದ ಸುತ್ತಲಿನವರಿಂದ ಕಥೆ ಕೇಳಿದ ಮೇಲೆ ನಾನು ನಾನೇ ಆದರೆ ಸಾಕು. ಬೇರೇನೂ ಆಗುವುದು ಬೇಡ ಎಂದು ಗಟ್ಟಿ ಮನಸ್ಸು ಮಾಡಿದಾಗ ನಾನು ಆಗಷ್ಟೇ ಹುಟ್ಟಿ ಕಣ್ಣು ಬಿಟ್ಟ ಅನುಭವ ನನಗೆ.

ಆಗ ಕತ್ತಲಾವರಿಸತೊಡಗಿತ್ತು.

ಗಾಢನಿದ್ರೆಯಿಂದ ಗಕ್ಕನೆ ಎಚ್ಚರಗೊಂಡಂತೆ ನಾನೆದ್ದು ನಡೆಯತೊಡಗಿದೆ. ನಾ ಹಿಡಿದದು ಅದೇ ಹಳೆಯ ಹಾದಿಯೇ ಅಥವಾ ಇದು ಈಗಷ್ಟೇ ಸೃಷ್ಟಿಯಾಗುತ್ತಿರುವ, ಇನ್ನೂ ಯಾರೂ ಕಾಲಿಡದ ಹೊಸ ಹಾದಿಯೋ ಗುರುತಾಗುತ್ತಿಲ್ಲ. ಒಂದು ನರಪಿಳ್ಳೆಯಿರಲಿ, ಗರಿಕೆ, ಕಂಟಿ, ಗಿಡಮರಗಳ ಹೊರತಾಗಿ ಜೀವವಿರುವಂತಹದೇನೂ ಎದುರಾಗುತ್ತಿಲ್ಲ. ಇದು ಭೂಲೋಕದ ಹಾದಿಯೇ? ನನಗೆ ಅಚ್ಚರಿ. ನಡೆಯುತ್ತಲೇ ಹೋದೆ, ದಾರಿ ನನ್ನದಾಗಬಹುದು, ನನ್ನೆದುರು ಭೂ ಗ್ರಹ ಜೀವಮಯವಾಗುತ್ತಾ ಬೆಳೆಯಬಹುದು ಎಂಬ ನಿರೀಕ್ಷೆಯಲ್ಲಿ. ಈ ನಿರೀಕ್ಷೆ ಎನ್ನುವುದು ನನ್ನಲ್ಲಿ ಬಲು ಪುರಾತನವಾದದ್ದಲ್ಲವೇ ಎಂದು ಮಸುಕುಮಸುಕು ನೆನಪು ಮರದಿಂದ ನೆತ್ತಿಗೆ ತೊಟ್ಟಿಕ್ಕುವ ಮಳೆಹನಿಯಂತೆ ಮಸ್ತಿಷ್ಕದಲ್ಲಿ ಟಪ್‌ಟಪ್ ಎಂದು ಸದ್ದು ಮಾಡತೊಡಗಿತು.

ಮೂಡಲಲ್ಲಿ ಬೆಳ್ಳಿ ಕಂಡಿತು. ಪಡುವಣ ಗಾಢ ನೇರಳೆಯಾಗತೊಡಗಿತು. ಎದುರಿನಿಂದ ಯಾರೋ ಇಬ್ಬರು ಬಂದಂತಾಗಿ ಅವರಿಬ್ಬರೂ ನನ್ನ ಎರಡೂ ಬದಿಗಳಲ್ಲಿ ಒಬ್ಬೊಬ್ಬರಂತೆ ಹಾದು ಹೊರಟೂಹೋದಂತೆಯೂ ಅನಿಸಿತು. ಮೂಡಲ ಕೆಂಪಾಗತೊಡಗಿದಂತೆ ಅಲ್ಲೊಬ್ಬರು ಇಲ್ಲೊಬ್ಬರು ಎದುರಾದರು. ಅವರ್‍ಯಾರೂ ನನ್ನನ್ನು